ಡಾ. ಟಿ.ಸಿ.ಎಂ. ರಾಯನ್ ರಸ್ತೆಯಿಂದ ಇನ್ನಿತರ ಭಾಗಗಳಿಗೆ ನಗರ ಸಾರಿಗೆ ವಾಹನಗಳನ್ನು ಓಡಿಸಲು ಒತ್ತಾಯ

೨೧೩. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

೧ ಬೆಂಗಳೂರು ನಗರ ಸಾರಿಗೆ ವಾಹನಗಳು ಹಿಂದಿನ ನಿಲುಗಡೆಗಳಿಂದಲೇ ಪ್ರಯಾಣಿಕರನ್ನು ತುಂಬಿಕೊಂಡು ಬಂದು ಡಾ. ಟಿ.ಸಿ.ಎಂ. ರಾಯನ್ ರಸ್ತೆಯಲ್ಲಿ ನಿಲ್ಲುವಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

೨. ಹಾಗಿದ್ದರೆ, ಡಾ. ಟಿ.ಸಿ.ಎಂ. ರಾಯನ್ ರಸ್ತೆಯಿಂದ ಕೆಂಪೇಗೌಡ ವೃತ್ತ, ಜಯನಗರ, ೪ನೇ ಬ್ಲಾಕ್ ಮತ್ತು ಇನ್ನಿತರ ಭಾಗಗಳಿಗೆ ನಗರ ಸಾರಿಗೆ ವಾಹನಗಳನ್ನು ಓಡಿಸಲು ಸರ್ಕಾರವು ಕ್ರಮ ಕೈಗೊಳ್ಳಬಹುದೇ?

ಶ್ರೀ ಕೆ. ಜೆ. ಜಾರ್ಜ್ (ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು).—

೧ ಇಲ್ಲಾ

೨ ಉದ್ಭವಿಸುವುದಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಹಸಿರು ಪಡಿತರ ಚೀಟಿಗಳನ್ನು ಅಸಮರ್ಪಕ ರೀತಿಯಲ್ಲಿ ವಿತರಣೆ ಮಾಡಿರುವ ಬಗ್ಗೆ

೨೨೮. ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ (ವಾಯುಕೊಂಡ),—ಮಾನ್ಯ ಆಹಾರ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮಾಂತರ ಪ್ರದೇಶದಲ್ಲಿ ಹಸಿರು ಪಡಿತರ ಚೀಟಿಗಳನ್ನು ಅಸಮರ್ಪಕ ರೀತಿಯಲ್ಲಿ ವಿತರಣೆ ಮಾಡಿರುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೆ;

ಆ) ಹಾಗಿದ್ದಲ್ಲಿ, ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ದಾವಣಗೆರೆ ತಾಲ್ಲೂಕಿನಲ್ಲಿ ವಿತರಣೆ ಮಾಡಿರುವ ಹಸಿರು ಪಡಿತರ ಚೀಟಿಗಳ ಸಂಖ್ಯೆ ಎಷ್ಟು?

ಶ್ರೀ ಕೆ.ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ಮಂತ್ರಿಗಳು).—

ಅ) ಹೌದು. ಕೆಲವು ದೂರುಗಳು ಬಂದಿದೆ.

ಆ) ಅನರ್ಹ ಕುಟುಂಬಗಳಿಗೆ ನೀಡಿರುವ ಹಸಿರು ಪಡಿತರ ಚೀಟಿಗಳನ್ನು ರದ್ದುಪಡಿಸಲು ೧೯೮೮ ರಲ್ಲಿಯೇ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಸೂಚನೆ ನೀಡಲಾಗಿದೆ. ೧-೪-೧೯೮೮ ರಿಂದ ಜನವರಿ ೧೯೯೦ ರವರೆಗೆ ೩೨,೭೬೯ ಅನರ್ಹರಿಗೆ ನೀಡಲಾದ ಹಸಿರು ಪಡಿತರ ಚೀಟಿಗಳನ್ನು ರದ್ದುಪಡಿಸಿ ೧೨,೪೦೫ ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ಜಿಲ್ಲಾ ಪರಿಷತ್ತಿನವರು ನೀಡಿರುತ್ತಾರೆ. ಅಲ್ಲದೇ ಅನರ್ಹರಿಗೆ ನೀಡಲಾದ ಹಸಿರು ಪಡಿತರ ಚೀಟಿಗಳನ್ನು ನಿರಂತರವಾಗಿ ಪತ್ತೆ ಹಚ್ಚಲು ಮತ್ತು ಪತ್ತೆ ಹಚ್ಚಿದ ಸುಳ್ಳು ಪಡಿತರ ಚೀಟಿಗಳನ್ನು ವಜಾ ಮಾಡುವ ಕಾರ್ಯವನ್ನು ಮುಂದುವರೆಸುವಂತೆ ಎಲ್ಲಾ ಜಿಲ್ಲಾ ಪರಿಷತ್ತು ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದೆ.

ಇ) ೨೮,೧೦೦

ಬಳ್ಳಾರಿ ಜಿಲ್ಲೆಯ ಕೈಗಾರಿಕೋದ್ಯಮಿಗಳಿಂದ ಬರಬೇಕಾಗಿರುವ ತೆರಿಗೆ ಬಾಕಿ ಕುರಿತಂ

೨೪೫. ಶ್ರೀ ಎಂ. ರಾಮಪ್ಪ (ಬಳ್ಳಾರಿ).— ಮಾನ್ಯ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯ ಕೈಗಾರಿಕೋದ್ಯಮಿಗಳಿಂದ ಸರ್ಕಾರಕ್ಕೆ ರೂ. ೫ ಲಕ್ಷಕ್ಕೂ ಮೇಲ್ಪಟ್ಟು ವಾಣಿಜ್ಯ ಮತ್ತು ಇತರೆ ತೆರಿಗೆಗಳ ಬಾಕಿ ಇರುವವರ ಹೆಸರು (ಕಂಪನಿಗಳ) ಮತ್ತು ಯಾವ ದಿನಾಂಕದಿಂದ ಇರುವುದು?

ಆ) ಇದುವರೆವಿಗೂ ಸರ್ಕಾರವು ಪಾವತಿ ಮಾಡದೆ ಇರುವ ಕೈಗಾರಿಕೋದ್ಯಮಿಗಳ ಮೇಲೆ ವಸೂಲಾತಿಗಾಗಿ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಅರ್ಥ ಸಚಿವರು).—

ಅ) ವಿವರ. ಹೆಸರು ಮತ್ತು ವಿವರಗಳನ್ನು ಅನುಬಂಧದಲ್ಲಿ ಗುರುತಿಸಿ ಲಗತ್ತಿಸಲಾಗಿದೆ.

ಆ) ಅನುಬಂಧದ ಅಂಕಣ ೫ರಲ್ಲಿ ತಿಳಿಸಿರುವಂತೆ.

ಅನುಬಂಧ

ಕ್ರಮ ಸಂಖ್ಯೆ	ಹೆಸರು	ವರ್ಷ	ಮೊತ್ತ	ತೆಗೆದುಕೊಂಡ ಕ್ರಮ
೧	ಮೆ. ಕೋಥಾರಿ ಶುಗರ್ಸ್ ಅಂಡ್ ಕೆಮಿಕಲ್ಸ್ ಶಿರಗುಪ್ಪ.	೧೯೭೩–೭೪ರಿಂದ ೧೯೮೩–೮೪	೨,೨೮,೬೬,೭೮೪–೯೪	ಬಡ್ಡಿ ರಹಿತ ಸಾಲದ ಮೊತ್ತ
೨	ಮೆ. ಇಂಡಿಯಾ ಶುಗರ್ಸ್ ಅಂಡ್ ರಿಫೈನರೀಸ್ ಲಿ. ಹೊಸಪೇಟೆ.	೧೯೭೩–೭೪ರಿಂದ ೧೯೮೧–೮೨	೪೪,೧೯,೧೯೩–೬೫	ಸರ್ಕಾರದಿಂದ ಕಂತು ಸೌಲಭ್ಯ ನೀಡಿರುವ ಮೊತ್ತ.
		೧೯೮೨–೮೩	೨೨,೧೦,೯೪೦–೫೯	ಸೆಕ್ಷನ್ ೧೩ (೩) (ಬಿ) ಅನ್ವಯ ಕ್ರಮ ಜಾರಿಗೊಳಿಸಿರುವ ಮೊತ್ತ.
		೧೯೪೪–೮೫	೧೯,೩೧,೦೮೫–೮೦	ಕರ್ನಾಟಕ ಉಚ್ಚ ನ್ಯಾಯಾಲಯ ತಡೆಯಾಜ್ಞೆಗೆ ಒಳಪಟ್ಟಿರುವ ಮೊತ್ತ
೩	ಫೈರಸ್ಸ್ ಅಲಾಯಸ್ಸ್ ಅಂಡ್ ಸ್ಟೀಲ್ ಲಿ. ಬಳ್ಳಾರಿ.	೧೯೭೬–೭೭ರಿಂದ ೧೯೮೪–೮೫	೬೫,೭೨,೪೧೦–೭೫	ನ್ಯಾಯಾಲಯದಿಂದ ತಡೆ ಆಜ್ಞೆಗೆ ಒಳಪಟ್ಟಿರುವ ಮೊತ್ತ.
೪ ಎ)	ನವ ಕರ್ನಾಟಕ ಸ್ಟೀಲ್ ಲಿ, ಬಳ್ಳಾರಿ.	೧೯೭೮–೭೯ರಿಂದ ೧೯೮೧–೮೨	೨೨,೭೮,೧೨೬–೦೦	ನ್ಯಾಯಾಲಯದಿಂದ ತಡೆ ಆಜ್ಞೆಗೆ ಒಳಪಟ್ಟಿರುವ ಮೊತ್ತ.
ಬಿ)	ನವ ಕರ್ನಾಟಕ ಸ್ಟೀಲ್ ಲಿ., ಬಳ್ಳಾರಿ.	೧೯೮೨–೮೩ರಿಂದ ೧೯೮೮–೮೯	೩೬,೬೨,೫೭೦–೦೦	ಸೆಕ್ಷನ್ ೧೪ರನ್ವಯ ನೋಟೀಸ್ ಜಾರಿ ಮಾಡಿರುವ ಮೊತ್ತ.
೫	ಬಳ್ಳಾರಿ ಸ್ಪಿನ್ನಿಂಗ್ ಅಂಡ್ ವೀವಿಂಗ್ ಕಂ., ಬಳ್ಳಾರಿ	೧೯೭೬–೭೭ರಿಂದ ೧೯೮೫–೮೬	೭೬,೭೪.೮೦೮–೦೦	ಆಫೀಶಿಯಲ್ ಲಿಕ್ವಿಡೇಟರ್ ಅವರಲ್ಲಿ ಕ್ಲೇಮ್ ಮಾಡಿರುವ ಮೊತ್ತ.
೬	ಕಂಪ್ಲಿ ಕೋ ಆಪರೇಟಿವ್ ಸ್ಪಿನಿಂಗ್ ಫ್ಯಾಕ್ಟರಿ, ಕಂಪ್ಲಿ.	೧೯೭೭–೭೮ರಿಂದ ೧೯೮೫–೮೬	೭,೬೬,೪೬೩–೦೦	ಸೆಕ್ಷನ್ ೧೩ (೩) (ಬಿ) ಅನ್ವಯ ಕ್ರಮ ಕೈಗೊಂಡಿರುವ ಮೊತ್ತ.
೭	ರಾಧಾಕೃಷ್ಣ ಸ್ಪಿನ್ನಿಂಗ್ ಇಂಡಸ್ಟ್ರೀಸ್, ಬಳ್ಳಾರಿ.	೧೯೭೩–೭೪ರಿಂದ ೧೯೮೧–೮೨	೫,೪೯,೮೭೭–೦೦	ಸೆಕ್ಷನ್ ೧೩ (೩) ( ) ಕ್ರಮ ಸರ್ಕಾರದ ಆದೇಶ ಸಂಖ್ಯೆ. ಸಿಐ ೫೮ ಎಫ್ಎಂಐ ೮೯ ದಿನಾಂಕ ೩೦-೬-೮೯ರನ್ವಯ ಉತ್ತೇಜನ ಧನ ನೀಡ ಬೇಕಾಗಿರುವುದು.